ಶ್ರೀ ಧರ್ಮಸಿಂಗ್ ನಾರಾಯಣಸಿಂಗ್ (ಗೃಹ ಸಚಿವರು) :–

ಅ) ಒಟ್ಟು 69 ಜನ ಮೃತಪಟ್ಟಿದ್ದು, 562 ಜನ ಗಾಯಗೊಂಡಿದ್ದಾರೆ. ಸುಮಾರು 1823 ಜನರು ತಮ್ಮ ಆಸ್ತಿ–ಪಾಸ್ತಿಗಳ ನಷ್ಟ ಅನುಭವಿಸಿದ್ದಾರೆ ಈ ಆಸ್ತಿಪಾಸ್ತಿಗಳ ನಷ್ಟ ಸುಮಾರು ರೂ. 4,13.85,907-00 ಗಳಷ್ಟು ಆಗಿದೆ.

ಆ) ಇದುವರೆವಿಗೂ ಸುಮಾರು 1,68,00,000–00 ರೂ.ಗಳ ಪರಿಹಾರವನ್ನು ಮೃತಪಟ್ಟವರ ವಾರಸುದಾರರಿಗೆ ಹಾಗೂ ನೊಂದ ಇತರರಿಗೆ ಪಾವತಿ ಮಾಡಲಾಗಿದೆ.

ಪ್ರಕರಣಗಳ ಸ್ವರೂಪಕ್ಕೆ ಅನುಗುಣವಾಗಿ ಜಿಲ್ಲಾ ವಿಭಾಗಾಧಿಕಾರಿಗಳು ಹಾಗೂ ಜಿಲ್ಲಾಧಿಕಾರಿಗಳು ಸಂತ್ರಸ್ಥರಿಗೆ ಪರಿಹಾರ ಮಂಜೂರಾತಿಯನ್ನು ತ್ವರಿತವಾಗಿ ಮಾಡುತ್ತಿದ್ದಾರೆ.

ಶ್ರೀ ಎಂ. ವಿ. ವೆಂಕಟಪ್ಪ :– ಈಗ ರಾಜ್ಯದಾದ್ಯಂತ ಪರಿಸ್ಥಿತಿಯು ಹೇಗೆ ಇದೆ ? ಎರಡನೆಯದಾಗಿ ಮುಳಬಾಗಿಲು ಟೌನ್‌ನಲ್ಲಿ ಒಬ್ಬ ಡಾಕ್ಟರ್ ಷಾಪನ್ನು ಗುಂಪು ಘರ್ಷಣೆಯಿಂದಾಗಿ ನಾಶ ಮಾಡಿದರು. ಅದರಲ್ಲಿ ಸುಮಾರು 2 ಲಕ್ಷ ರೂಪಾಯಿಗಳಷ್ಟು ನಷ್ಟವಾಗಿದೆಯೆಂದು ಅಸೆಸ್ ಮಾಡಿದ್ದಾರೆ. ಇನ್ನೊಂದು ಕಡೆ ಕ್ಲಾಕ್ ಷಾಪ್ ನಾಶವಾಗಿದೆ. ಅದರಲ್ಲಿ ನಾಲ್ಕು ಲಕ್ಷ ರೂಪಾಯಿಗಳು ನಷ್ಟವಾಗಿದೆಯೆಂದು ಇದನ್ನು ಸರಕಾರದವರೇ ಅಸೆಸ್ ಮಾಡಿದ್ದಾರೆ. ತಹಶೀಲ್ದಾರ್‌ರವರು ಅಸೆಸ್ ಮಾಡಿದ್ದಾರೆ. ಅಂತಹ ಕಡೆ ನೀವು ಪರಿಹಾರ ಕೊಡುವುದು ಎಷ್ಟು, 15 ಸಾವಿರ ಇದ್ದರೆ ಗರಿಷ್ಟ ಎಂದು ವಿಭಾಗಾಧಿಕಾರಿಗಳ ಲೆವೆಲ್‌ಗೆ ಬಂದರೆ 20 ಸಾವಿರ ಕೊಡುತ್ತೀರಿ, ಅಂತಹವರಿಗೆ ಸಾಲ ಕೊಡಿಸುವುದು, ಮನೆ ಕಳೆದುಕೊಂಡವರಿಗೆ ಮನೆ ಕಟ್ಟಲು ಸಾಲ ಕೊಡಿಸುವ ವ್ಯವಸ್ಥೆ ಮಾಡುವಿರಾ ?

ಶ್ರೀ ಧರ್ಮಸಿಂಗ್ :– ಪ್ರಪ್ರಥಮವಾಗಿ ಇಂದು ಕರ್ನಾಟಕದಲ್ಲಿ ಶಾಂತಿ ನೆಲೆಸಿದೆ, ಯಾವುದೂ ಗಲಾಟೆ ಯಾಗುತ್ತಿಲ್ಲ. ಎರಡನೆಯದಾಗಿ ಮುಳಬಾಗಿಲಿನಲ್ಲಿ ಏನಾಯಿತು ಎಂದು ಹೇಳಿದಿರಿ ಅದು ಪ್ರತ್ಯೇಕ ಪ್ರಶ್ನೆ. ಅದರ ಬಗ್ಗೆ ಕೂಡ ನಾನು ವರದಿ ತರಿಸುತ್ತೇನೆ. ದಿನಾಂಕ 6–10–90 ಕ್ಕೆ ಒಂದು ಆಜ್ಞೆ ಹೊರಡಿಸಿದ್ದೇವೆ. ಅದರಲ್ಲಿ 2 ಸಾವಿರ ಕನಿಷ್ಟ ಇದ್ದರೂ ಜಿಲ್ಲಾಧಿಕಾರಿ ಲೆವೆಲ್‌ನಲ್ಲಿ 10 ಸಾವಿರ, ಡಿವಿಜಿನಲ್ ಕಮಿಷನರ್ ಲೆವೆಲ್‌ನಲ್ಲಿ 20 ಸಾವಿರ ಕೊಡಬೇಕೆಂದು ತೀರ್ಮಾನ ಮಾಡಿದ್ದೇವೆ. ಈಗಾಗಲೇ ಆಸ್ತಿ ನಷ್ಟವಾಗಿರುವುದು 4 ಕೋಟಿ, ಆದರೆ 1 ಕೋಟಿ 68 ಲಕ್ಷ ರೂಪಾಯಿಗಳನ್ನು ಈಗಾಗಲೇ ಬಿಡುಗಡೆ ಮಾಡಿದ್ದೇವೆ ಮತ್ತು ಬೇರೆ ಕಡೆ ಎಲ್ಲೆಲ್ಲಿ ಎರಡು ಲಕ್ಷ, ಮೂರು ಲಕ್ಷ ಹಾನಿಯಾಗಿದೆ, ಆ ವಿವರಗಳು ಸರ್ಕಾರಕ್ಕೆ ಬಂದಿವೆ, ಅವರಿಗೆ ರೆವಿನ್ಯೂ ಡಿಪಾರ್ಟ್‌ಮೆಂಟ್‌ನಿಂದ ಲೋನ್ 5 ವರ್ಷದ್ದು ಕೊಡಿಸುವ ವ್ಯವಸ್ಥೆ ಸರ್ಕಾರ ಮಾಡುತ್ತಿದೆ.

ಶ್ರೀ ಎಂ. ವಿ. ವೆಂಕಟಪ್ಪ :– ಮುಳಬಾಗಿಲ್ ಟೌನ್‌ನಲ್ಲಿ ಹಿಂದೆ ಫೈರಿಂಗ್ ಆಯಿತು, ಅದರಲ್ಲಿ ಒಬ್ಬ ಸತ್ತ. ಆದರೆ ಪೋಲೀಸರು ಫೈರಿಂಗ್‌ನಲ್ಲಿ ಸತ್ತ ಎಂದು ಹೇಳದೆ ಸ್ಟ್ಯಾಬಿಂಗ್‌ನಿಂದ ಸತ್ತ ಎಂದು ಹೇಳಿದರು. ಅದರ ವಿವರಗಳನ್ನು ಮುಖ್ಯಮಂತ್ರಿಗಳು ಹೋದ ಸದನದಲ್ಲಿ ಕಳಿಸಿಕೊಡಿ ಎಂದು ಹೇಳಿದ ಪ್ರಕಾರ ಈಗ ಕಳಿಸಿಕೊಡುತ್ತಿದ್ದೇನೆ. ಅದರ ಬಗ್ಗೆ ವಿಚಾರಣೆ ಮಾಡಬೇಕು. ಎರಡನೆಯದು, ಇದೇ ಕೆಲಸಕ್ಕಾಗಿ ಕೆಲವು ಗೂಂಡಾ ಗಳು ಇರುತ್ತಾರೆ, ಗಲಭೆ ಮಾಡುವುದೇ ಅವರ ಕರ್ತವ್ಯ. ಅಂತಹ ಕಡೆ ಏನಾದರೂ ಪ್ಯೂನಿಟೀವ್ ಟ್ಯಾಕ್ಸ್ ಹಾಕುವ ಬಗ್ಗೆ ಸರ್ಕಾರ ಆಲೋಚನೆ ಮಾಡುತ್ತದೆಯೇ ?

ಶ್ರೀ ಧರ್ಮಸಿಂಗ್ :– ಸ್ಟ್ಯಾಬಿಂಗ್ ಕೇಸ್ ಬಗ್ಗೆ ಎಕ್ಸಾಮಿನ್ ಮಾಡಿಸುತ್ತೇನೆ. ಇತರ ವಿಷಯಗಳ ಬಗ್ಗೆಯೂ ಸರ್ಕಾರ ಯೋಚನೆ ಮಾಡುತ್ತದೆ.

ವಿಷಯ :– ಹರಪನಹಳ್ಳಿ ತಾಲ್ಲೂಕಿನಲ್ಲಿ ಅಗ್ನಿ ಶಾಮಕದಳ ವಿಲ್ಲದೇ ಇರುವ ಬಗ್ಗೆ.

ಚುಕ್ಕೆ ಗುರುತಿನ ಪ್ರಶ್ನೆ ಸಂಖ್ಯೆ 288 (789)

ಶ್ರೀ ಬಿ. ಹೆಚ್. ಯಂಕಾನಾಯಕ (ಹರಪನ ಹಳ್ಳಿ) :– ಮಾನ್ಯ ಗೃಹ ಸಚಿವರು ಈ ಕೆಳಕಂಡ ಪ್ರಶ್ನೆಗಳಿಗೆ ದಯವಿಟ್ಟು ಉತ್ತರಿಸುವರೆ ?

ಅ) ಹರಪನಹಳ್ಳಿಯ ತಾಲ್ಲೂಕಿಗೆ ಹತ್ತಿರ ಯಾವುದೇ ಅಗ್ನಿ ಶಾಮಕ ದಳವಿಲ್ಲದೇ ತಾಲ್ಲೂಕಿನಲ್ಲಿ ಬೆಂಕಿ ಅನಾಹುತವಾದಾಗ ತೊಂದರೆ ಪಡುತ್ತಿರುವುದರಿಂದ ಅಗ್ನಿಶಾಮಕದಳವೊಂದನ್ನು ತೆರೆಯಬೇಕೆಂಬ ಬೇಡಿಕೆ ಇರುವುದು ಸರ್ಕಾರದ ಗಮನಕ್ಕೆ ಬಂದಿದೆಯೇ ?

ಆ) ಹಾಗಿದ್ದಲ್ಲಿ ಸದರಿ ತಾಲ್ಲೂಕಿನಲ್ಲಿ ಕೂಡಲೇ ಅಗ್ನಿ ಶಾಮಕ ದಳ ತೆರೆಯುವಂತೆ ಸರ್ಕಾರದವರು ಕ್ರಮ ಕೈಗೊಳ್ಳುವರೆ ೇ ?

ಶ್ರೀ ಧರ್ಮಸಿಂಗ್ ನಾರಾಯಣಸಿಂಗ್ (ಗೃಹ ಮಂತ್ರಿಗಳು) :–

ಆ) ಹೌದು.

ಆ) ಹರಪನಹಳ್ಳಿಯಲ್ಲಿ ಅಗ್ನಿ ಶಾಮಕ ಠಾಣೆಯನ್ನು 1990–91ನೇ ಆರ್ಥಿಕ ಸಾಲಿನಲ್ಲಿ ಸ್ಥಾಪಿಸುವ ಪ್ರಸ್ತಾವನೆ ಸರ್ಕಾರದ ಪರಿಶೀಲನೆಯಲ್ಲಿದೆ.

ಶ್ರೀ ಬಿ. ಹೆಚ್. ಯಂಕಾನಾಯಕ :– ಸ್ವಾಮಿ, ನಾನು ಇಷ್ಟು ವರ್ಷಗಳಿಂದ ಅಸೆಂಬ್ಲಿಯಲ್ಲಿದ್ದು ಹೇಳುತ್ತಾ ಬಂದಿದ್ದೇನೆ. ನಮ್ಮ ಹರಪನಹಳ್ಳಿ, ಸುತ್ತ ಮುತ್ತಲ ಪಟ್ಟಣಗಳಿಂದ ಕಡಿಮೆ ಎಂದರೆ ಸರಾಸರಿ 50 ಕಿ. ಮೀ. ಅಂತರದಲ್ಲಿದೆ. ದಾವಣಗೆರೆಯಿಂದ 40–45 ಕಿ. ಮೀ. ದೂರದಲ್ಲಿದೆ. ಹಾಗೆಯೇ ಹಡಗಲಿ, ಹೂವಿನಹಡಗಲಿಗಳಿಂದಲೂ ದೂರದಲ್ಲಿದೆ ಅಂದರೆ ಹರಪನಹಳ್ಳಿ ಮಧ್ಯಭಾಗದಲ್ಲಿದೆ. ಆದ್ದರಿಂದ ಹರಪನಹಳ್ಳಿಯಲ್ಲಿ ಒಂದು ಅಗ್ನಿಶಾಮಕ ಸ್ಥಾಪನೆ ಮಾಡಬೇಕೆಂದು ನಾವು ಪ್ರಾರ್ಥನೆ ಮಾಡಿಕೊಂಡೆವು. ಆದ್ದರಿಂದ ಇದನ್ನು ಮಂಜೂರು ಮಾಡಿಕೊಡಬೇಕು. ಈಗ 1990–91 ನೇ ಆರ್ಥಿಕ ಸಾಲಿನಲ್ಲಿ ಹರಪನಹಳ್ಳಿಯಲ್ಲಿ ಅಗ್ನಿಶಾಮಕ ಠಾಣೆಯನ್ನು ಸ್ಥಾಪಿಸುವ ಪ್ರಸ್ತಾವನೆ ಸರ್ಕಾರದ ಪರಿಶೀಲನೆಯಲ್ಲಿದೆ ಎಂದಿದ್ದೀರಿ. ಆದ್ದರಿಂದ ಅದನ್ನು ಯಾವಾಗ ಪ್ರಾರಂಭ ಮಾಡುವಿರಿ ಎನ್ನುವುದನ್ನು ಹೇಳಬೇಕು.

ಶ್ರೀ ಧರ್ಮಸಿಂಗ್ :– 1990–91 ರಲ್ಲಿ ಹರಪನಹಳ್ಳಿಯಲ್ಲಿ ಅಗ್ನಿಶಾಮಕ ಠಾಣೆಯನ್ನು ಸ್ಥಾಪಿಸುವ ವಿಚಾರ ಸರ್ಕಾರದ ತೀವ್ರತರ ಪರಿಶೀಲನೆಯಲ್ಲಿದೆ, ಸರ್ಕಾರ ಮಾಡುತ್ತದೆ.

ವಿಷಯ :– ಕೇಂದ್ರ ಕಾರಾಗೃಹದ ಬಂದಿಗಳಿಗೆ ನೀಡುವ ಆಹಾರ.

ಚುಕ್ಕೆ ಗುರುತಿನ ಪ್ರಶ್ನೆ ಸಂಖ್ಯೆ 289 (1126)

ಶ್ರೀ ಡಿ. ಪಲಗೇಗೌಡ (ಪಾಂಡವಪುರ) :– ಮಾನ್ಯ ಗೃಹ ಮಂತ್ರಿಗಳು ಈ ಕೆಳಕಂಡ ಪ್ರಶ್ನೆಗಳಿಗೆ ದಯವಿಟ್ಟು ಉತ್ತರಿಸುವರೆ ?

ಅ) ಬೆಂಗಳೂರು ಕೇಂದ್ರ ಕಾರಾಗೃಹದ ಬಂದಿಗಳಿಗೆ ನೀಡುವ ಆಹಾರಕ್ಕೆ ಸಂಬಂಧಿಸಿದ ದಿನಸಿ ಸಾಮಗ್ರಿಗಳನ್ನು ಖಾಸಗಿ ವ್ಯಕ್ತಿಯೊಬ್ಬರಿಂದ ಖರೀದಿಸುತ್ತಿರುವುದು ನಿಜವೇ ?

ಆ) ಆಹಾರ ಮತ್ತು ನಾಗರಿಕ ಸರಬರಾಜು ಇಲಾಖೆ ಹಾಗೂ ಜನತಾ ಬಜಾರಗಳಿಂದ ಸದರಿ ದಿನಸಿ ಗಳನ್ನು ಖರೀದಿಸಲು ಈ ಹಿಂದೆ ಹೊರಡಿಸಿದ್ದ ಆದೇಶವನ್ನು ತಡೆಹಿಡಿದಿರುವುದು ನಿಜವೇ ?

ಇ) ರಾಜ್ಯದ ಕಾರಾಗೃಹಗಳಿಗೆ ಸರಬರಾಜಾಗುವ ದಿನಸಿಗಳನ್ನು ಓಪನ್ ಟೆಂಡರ್ ಮೂಲಕ ಖರೀದಿಸದೆ ಇರಲು ಕಾರಣಗಳೇನು ? (ವಿವರವಾದ ಕಾರಣಗಳನ್ನು ಒದಗಿಸುವುದು)

ಶ್ರೀ ಧರ್ಮಸಿಂಗ್ ನಾರಾಯಣಸಿಂಗ್ (ಗೃಹ ಸಚಿವರು) :–

ಅ) ಇಲ್ಲ.

ಆ) ಇಲ್ಲ.

ಇ) 1) ನಿಯಂತ್ರಿತ ಆಹಾರ ಪದಾರ್ಥಗಳಾದ ಅಕ್ಕಿ, ಗೋಧಿ, ಸಕ್ಕರೆ, ಸೀಮೆಎಣ್ಣೆ ಮುಂತಾದವುಗಳನ್ನು ಆಹಾರ ಮತ್ತು ನಾಗರೀಕ ಸರಬರಾಜು ಇಲಾಖೆಯು ಪರವಾನಿಗೆ ಮೇರೆಗೆ ಖರೀದಿಸಲಾಗುತ್ತಿದೆ.

2) ಉಳಿದ ಆಹಾರ ಪದಾರ್ಥಗಳು ಹಾಗೂ ಇತರೆ ವಸ್ತುಗಳನ್ನು

ಅ) ಸ್ಥಳೀಯ ಗ್ರಾಹಕರ ಬಳಕೆದಾರರ ಸಹಕಾರ ಸಂಘ, ಅಥವಾ

ಆ) ಜಿಲ್ಲಾ ಕೇಂದ್ರ ಸಹಕಾರ ಸಗಟು ಮಾರಾಟ ಮಳಿಗೆ ಅಥವಾ

ಇ) ಜಿಲ್ಲಾ ಸಹಕಾರ ಸಗಟು ಮಹಾಮಂಡಳಿಗಳಿಂದ ಖರೀದಿಸಲಾಗುತ್ತಿದೆ.